# ಕಾಲ ನದಿಯ ವಿಸ್ಮಯ ಲಹರಿ



– 47ನೇ ಪುಟದಿಂದ

ಮುತ್ತಿದ ಮಂಜಿನೊಳಗಿಂದ ಬಂದ ಕಾಪ್ಸ್ ಮೈಯಲುಗಿಸಿ ಎಬ್ಬಿಸಿದಾಗ ಗಲಿಬಿಲಿಯಲ್ಲಿದ್ದ. ಮಧ್ಯರಾತ್ರಿ ತನಕ ಇಲ್ಲೇ ಇದ್ದೆವಲ್ಲ. ನೀನಾಗ ಕಾಣಿಸಲಿಲ್ಲ... ಈಗೆಲ್ಲಿಂದ ಬಂದೆ? ಎಂದು ಅಚ್ಚರಿಯಿಂದ ಪ್ರಶ್ನಿಸಿದರು. ಸುಖಿಗೆ ಏನು ಹೇಳ ಬೇಕೆಂಬುದೇ ತಿಳಿಯದೆ ಐ...ಮೈ ...ಕೇ... ಎಂದೇನೊ ತೊದಲಿದ. ಪೂರ್ತಿ ಎಚ್ಚರಿಸಿ ಲಾಡ್ಜ್‌ಗೆ ಕರೆದೊಯ್ದು ಅವನ ವಿವರಗಳನ್ನು ಪರಿಶೀಲಿಸಿ ಓಕೆ.. ಟೇಕ್ ರೆಸ್ಟ್ ಎಂದು ಬಿಟ್ಟು ಹೋದರು.

ಗಾಢವಾಗಿ ನಿದ್ದೆಹತ್ತಿತು. ಮೊಬೈಲ್ ಟ್ರಿಣಗುಟ್ಟೆ ಕಣ್ಣುಬಿಟ್ಟಾಗ ತೆರೆದ ಕಿಟಕಿ ತೂರಿದ ಬಿಸಿಲು ಚುರುಗುಡುತ್ತಿತ್ತು. ಮಾವನ ದನಿ 'ಹಿತವಿಯನ್ನು ಆಸ್ಪತ್ರೆಗೆ ಕರ್ಕೊಂಡ್ ಬಂದಿದೀವಪ್ಪಾ. ಹೆರಿಗೆ ನೋವು ಶುರುವಾಗಿದೆ' ಅನ್ನುವಷ್ಟರಲ್ಲಿ ಲೈನ್ ಕಟ್ಟಾಯಿತು. ಇವನೇ ಮಾಡಿದರೆ ಲೈನ್ ಸಿಗಲಿಲ್ಲ. ಹೆರಿಗೆ ಹೆಣ್ಣಿಗಷ್ಟೇ ಅಲ್ಲ , ಹಚ್ಚಿಕೊಂಡ ಎಲ್ಲ ಜೀವಗಳಿಗೂ ನೋವು ತರುತ್ತದೆ ಎನ್ನಿಸಿ ಎದ್ದುಕೂತ. ಹಿತವಿ ಬಗ್ಗೆ ಕಾತರವಾಯಿತು. ತನ್ನ ಪ್ರೀತಿಯೇ ಅವಳನ್ನೂ, ಕೂಸನ್ನೂ ಕಾಪಾಡಲೆಂದು ಹಂಬಲಿಸಿದ.

ರಾತ್ರಿಯುದ್ದಕ್ಕೂ ನೋಡಿದ್ದು ಕೇಳಿದ್ದೆಲ್ಲ ನಿಜವೋ ಸುಳ್ಳೊ ಕನಸೊ ನನಸೊ ಎಂಬ ಅನುಮಾನದ ಹೊಗೆಯಲ್ಲೂ ಅವರೆಲ್ಲ ಎಂಥಾ ಅದ್ಭುತ ಜೀವಿಗಳು ಎಂಬ ಗೌರವಭಾವವುಕ್ಕಿತು. ಬದುಕಿಂದ ಅವರು ಕಲಿತ ಪಾಠ ತನಗೂ ಉಪಯೋಗಕ್ಕೆ ಬಿದ್ದೀತೆನ್ನಿಸಿತು. ನೇರವಾಗಿ ನೆಲದೊಡಲಿಂದ ಉಕ್ಕದೆ ಅಂತಿಮ ವಾಗಿ ಸಾಗರ ಸೇರದೆ ಕೇವಲ 36 ಮೈಲುದ್ದ ಹರಿಯುವ ಈ ವಿಚಿತ್ರ ನದಿ ನಯಾಗರಾ ಸರೋವರ ಹೊರಚೆಲ್ಲಿದ ನೀರಾಗಿ 22 ಮೈಲಿ ದೂರ ಹರಿಯು ವುದರೊಳಗೇ ಚಿಪಾವಾ ಮತ್ತು ಟೊನವಾಂಡ ಸೀಳುಗಳಾಗಿ ಗ್ರ್ಯಾಂಡ್ ಐಲ್ಯಾಂಡ್ ಸೃಷ್ಟಿಸಿ ಮತ್ತೆ ಒಂದುಗೂಡಿ ಮೂರು ಜಗದ್ವಿಖ್ಯಾತ ಜಲಪಾತಗಳಾಗಿ ಸಾಲಾಗಿ ಧುಮುಕಿ ಮುಂದೆ ಕೇವಲ 14 ಮೈಲಿ ಹರಿದು ಆಂಟೇರಿಯೋ ಸರೋವರದಲ್ಲಿ ಐಕ್ಯವಾಗಿ ಬಿಡುವ ಭೌಗೋಳಿಕ ವಿಸ್ಮಯ ಎಷ್ಟೆಲ್ಲಾ ದಂತಕತೆ ಐತಿಹ್ಯ ಚಾರಿತ್ರಿಕ ಸಂಗತಿಗಳ ಆಗರವಾಗಿದೆಯಲ್ಲ ಎಂದು ಅಚ್ಚರಿಯಾಯಿತು.

ಅಂದ ಹಾಗೆ ಕಾಲದ ಮೆಲುಕು ಎಂದರೆ ಏನು?...ನೆನಪುಗಳ ಜಾತ್ರೆಯೆ? ಎಷ್ಟು ವರ್ಷಕ್ಕೊಮ್ಮೆ ನಡೆಯುತ್ತದೆ...ಎಲ್ಲೆಲ್ಲಿ? ಎಷ್ಟು ಕೂದಲು ಕಿತ್ತರೂ ಹೊಳೆಯಲಿಲ್ಲ...ಇಂಥ ಅಸಂಖ್ಯಾತ ಸಂಭಾವ್ಯ ಅಸಂಭಾವ್ಯ ಸಂಗತಿಗಳನ್ನೆಲ್ಲ ಜೋಪಾನವಾಗಿ ಸಂಭಾಳಿಸುವ ಮನಸ್ಸೆಂಬ ಮೈಕ್ರೊಕಾಸ್ಮಿಕ್ ಸೂಪರ್ ಕಂಪ್ಯೂಟರ್ ಎಂಥಾ ಮಹಾನ್ ಮಾಯಾಗಾರ ಎನ್ನಿಸಿ ಮೂಗಿನ ಮೇಲೆ ಬೆರಳಿಟ್ಟುಕೊಂಡ. ಮನಸ್ಸು ಕಾಲವನ್ನು ಗ್ರಹಿಸುವ ಪರಿಯೇ ಒಂದು ನೈಸರ್ಗಿಕ ಪವಾಡವಲ್ಲವೇ? ಸೂರ್ಯನ ಬಂಗಾರ ಕಿರಣವೇರಿ ಸತ್ಯಕ್ಕೆ ಕೈಚಾಚುವ ವಿಜ್ಞಾನ, ಚಂದ್ರನ ಬೆಳ್ಳಿ ಬೆಳದಿಂಗಳಲ್ಲಿಳಿದು ಸೌಂದರ್ಯಕ್ಕೆ ಕಣ್ಣರಳಿಸುವ ಕಲೆ ಎರಡೂ ಮನಸ್ಸಿನ ಉತ್ಪನ್ನಗಳೇ ಅಲ್ಲವೇ?. ಕತೆ ಕವಿತೆ ಎಲ್ಲ ಕಾಲ ನದಿಯಲ್ಲಿ ಮನಸ್ಸು ತೇಲಿಬಿಟ್ಟ ಭಾವನಾವೇಗಳೇ ಅಲ್ಲವೆ? ಕೆಲವು ಮುದವಾಗಿ ದೂರ ದೂರದ ತನಕ ತೇಲಿ ದೃಷ್ಟಿ ಹಿಗ್ಗಿಸಿದರೆ ಕೆಲವು ಅಲ್ಲಲ್ಲೆ ಮುಳುಗಿ ಮರೆವಿನ ತಳ ಕಚ್ಚುತ್ತವಲ್ಲ ಯಾಕೆ ಎಂದು ಕೇಳಿಕೊಂಡ.

ಬ್ರೇಕ್ ಫಾಸ್ಟ್ ಮುಗಿಸಿದವನೇ ಜಲಪಾತದ ಸಮೀಪ ಲಾಳಾಕಾರವಾಗಿ ಸುತ್ತಿಸುವ ಮೇಯ್ಡ್ ಆಫ್ ದಿ ಮಿಸ್ಟ್ ಲಾಂಚ್ ಹತ್ತಿ ನಿಂತು ಕ್ಯಾಮೆರಾ ತಿರುಗಿಸುತ್ತ ಅಮೆರಿಕನ್ ಫಾಲ್ಸ್ ಬ್ರೈಡಲ್ವೇಲ್ ಫಾಲ್ಸ್ ಮತ್ತು ಸುಮಾರು 170 ಅಡಿ ಆಳಕ್ಕೆ 2200 ಅಡಿ ಅಗಲಕ್ಕೆ ಸುರಿವ ಹಾಸರ್ಶೂ ಅಥವಾ ಕೆನಡಿಯನ್ ಫಾಲ್ಸ್ ಎಂಬ ನಯಾಗರಾದ ತ್ರಿವಳಿ ಜಲಪಾತಗಳನ್ನು ವೀಡಿಯೋ ದಲ್ಲಿ ಸೆರೆ ಹಿಡಿದ. ತುಂತುರು ಸಿಡಿವ ಮುತ್ತಿನ ಮಳೆಯಲ್ಲಿ ನೆನೆದು ಪುಳಕಗೊಂಡ.

ಐಮ್ಯಾಕ್ಸ್ ಥೇಟರ್ ಹೊಕ್ಕು ನಯಾಗರಾ ಡಾಕ್ಯುಮೆಂಟರಿ ನೋಡಲು ಕುಳಿತರೆ ಅಲ್ಲೊಂದು ಮಹಾ ವಿಸ್ಮಯ ಕಾದಿತ್ತು. ರಾತ್ರಿಯ ಕಾಲದ ಮೆಲುಕು ಗೋಷ್ಠಿಯಲ್ಲಿ ಕಂಡವರೆಲ್ಲ ಇಲ್ಲಿ ಪರದೆ ಮೇಲೆ ಕಾಣಿಸಿಕೊಳ್ಳತೊಡಗಿದರು! ಇತಿಹಾಸಪೂರ್ವ ಯುಗದಲ್ಲೇ ಆಂನಿಯಾಹ್ರಾ ಎಂಬ ಕಾಡುಕುಲದ ಯಜಮಾನ ಈಗಲ್ ಐ ನ ಮಗಳು ಲೆಲವಾಲಾ ತನ್ನ ಕುಲಬಂಧುಗಳನ್ನು ಕಾಪಾಡಲೆಂದು ಬಿಚರ್ ಮರದ ದೋಣಿಯಲ್ಲಿ ಕೂತು ತೇಲುತ್ತ ಲಾಳಾಕಾರದ ಜಲಪಾತದ ನೆತ್ತಿಯಿಂದ ಧುಮುಕಿದಳು. 1859ರ ಜೂನ್ 30ರಂದು ಫೆಂಚ್ಮನ್ ಚಾರ್ಲ್ಸರ್ ಬ್ಲಾಂಡಿನ್ ಈ ದಡದಿಂದ ಆ ದಡಕ್ಕೆ ಎಳೆದು ಕಟ್ಟಿದ್ದ 1100 ಅಡಿ ಉದ್ದದ ಹಗ್ಗದ ಮೇಲೆ ನಡೆದು ದಾಟಿದ...ಮತ್ತೊಮ್ಮೆ ಹ್ಯಾರಿ ಕೊಲ್ಕಾಡರ್ ಎಂಬವನನ್ನು ಬೆನ್ನ ಮೇಲೆ ಹೊತ್ತುಕೊಂಡು ಹಗ್ಗದ ಮೇಲೆ ನಡೆದ. 1838 ರಲ್ಲಿ ನ್ಯೂಯಾರ್ಕ್ ಸ್ಟೇಟ್‌ನ ಆಬನರ್ನ್ನಲ್ಲಿ ಹುಟ್ಟಿದ ಆ್ಯನಿ ಟೇಯ್ಲರ್ ಇಪ್ಪತ್ತನೆ ಶತಮಾನ ಕಾಲಿಟ್ಟ ವರ್ಷ... ಎಂದರೆ 1901ರ.. ಅಕ್ಟೋಬರ್ 24ರಂದು ತನ್ನ 63ನೆ ವಯಸ್ಸಿನಲ್ಲಿ ಪಿಕಲ್ ಬ್ಯಾರೆಲ್‌ನಲ್ಲಿ ಅಡಗಿ ಕೂತು ಈ ಜಲಪಾತ ಹಾರಿ ಬದುಕಿ ಬಂದಳು. ಆದರೆ ಅವಳ ಮ್ಯಾನೇಜರ್ ಫ್ರ್ಯಾಂಕ್ ಎಂ.ರಸೆಲ್ ಎಂಬವ ಅವಳ ಬ್ಯಾರೆಲನ್ನೂ ಸಂಗ್ರಹವಾದ ಹಣವನ್ನೂ ಎತ್ತಿಕೊಂಡು ಪರಾರಿಯಾದ. ಇವರಷ್ಟೇ ಅಲ್ಲದೆ ಸಾಹಸಕ್ಕಾಗಿಯೊ ಜೀವನದಲ್ಲಿ ಜಿಗುಪ್ಸೆಗೊಂಡೋ ಈ ಜಲಪಾತಕ್ಕೆ ಜಿಗಿದು ಪ್ರಾಣ ಕಳೆದುಕೊಂಡವರು ಹಲವರಿದ್ದಾರೆ.

ಈ ಮಾಹಿತಿಗಳೆಲ್ಲ ಮನದಾಳದ ಕುತೂಹಲದ ಕಣಿವೆಯೊಳಗೆ ಗುಟಕ್ಕನೆ ಇಂಗುತ್ತಿದ್ದಂತೆ ಥಂಡಾ ಹೊಡೆದ ಸುಖಿ. ಎಲಾ ಇದೇನಿದು!...ಎಂಥಾ ವಿಚಿತ್ರ... ಏನೇನೋ ಪ್ರಶ್ನೆಗಳೆದ್ದು ದಿಗಿಲು ಬಿದ್ದವನೆ ಬುದಂಗನೆ ಎದ್ದು ನಿಂತ. ಹಿಂದಿನ ಸೀಟಿನಲ್ಲಿದ್ದವರು 'ಸಿಡೌನ್ ಪ್ಲೀಸ್' ಎಂದರು. ಪರದೆ ಮೇಲೆ ಮಾಹಿತಿ ಮಾಲೆ ಸೂರೆಯಾಗುತ್ತಲೇ ಇತ್ತು. ಆ ಹಳೆಗಾಲದ ಹುಡುಗಿಯೇ ಆದಿವಾಸಿ ಚೆಲುವೆ ಲೆಲವಾಲಾನೆ?...ಆ ಮಧ್ಯಯುಗದ ನಡುವಯಸ್ಕನ ಹೆಸರು ಬ್ಲಾಂಡಿನ್ ಎಂತಲೆ? ಆ ಹೊಸಗಾಲದ ಮುದುಕಿಯೇ ಆ್ಯನಿ ಟೇಯ್ಲರ್ ಎಂಬ ಗೋಳಿನ ರಾಣಿಯೆ?...ಹಾಗಾದರೆ ನಾನಾ ನೀರಗವಿಗೆ ಹೋದದ್ದು ಕನಸಿನಲ್ಲಲ್ಲವೆ?

ಮೋಡಿಗೊಳಗಾಗಿ ನಾ ಹಿಂಬಾಲಿಸಿದ್ದು ಕನಸಿನಲ್ಲಿ ನುಗ್ಗಿ ಬಂದ ಹೆಸರಿಲ್ಲದ ಪಾತ್ರಗಳನ್ನಲ್ಲವೆ? ಅವರೆಲ್ಲ ಹಿಂದೊಮ್ಮೆ ನಿಜವಾಗಿಯೂ ಬದುಕಿದ್ದ ಚಾರಿತ್ರಿಕ ವ್ಯಕ್ತಿಗಳೇ? ನಾ ಕಂಡದ್ದು ಅವರ ಪ್ರೇತಗಳನ್ನೇ? ಏನೊಂದೂ ಅರ್ಥವಾಗದೆ ಎದುರಿಗೆ ಕಾಣುತ್ತಿದ್ದ ಎಲ್ಲದರಾಚೆಗೆ ಕಣ್ಣು ನೆಟ್ಟು ನಿಂತ.

ಅಷ್ಟರಲ್ಲಿ ಮತ್ತೆ ಮೊಬೈಲ್ ಟ್ರಿಣಗುಟ್ಟಿತು. ಗಾಬರಿಯಿಂದ ಎತ್ತಿಕೊಂಡರೆ ಮಾವ 'ಡಬಲ್ ಕಂಗ್ರ್ಯಾಟ್ಸ್ ಅಪ್ಪಾ, ಗಂಡು ಹೆಣ್ಣು ಅವಳಿ ಜವಳಿ ಹುಟ್ಟಿವೆ' ಎಂದರು. ಹಿತವಿ ಹೆಂಗಿದಾಳೆ? ಕೇಳಿದ. ಸುಸ್ತಾಗಿದೆ...ಆದ್ರೆ ಆರೋಗ್ಯವಾಗಿದಾಳೆ ಎಂದರು. ಭಾಗ್ಯದ ಕೈತುತ್ತು ಬೊಗಸೆ ತುಂಬಿದಂತಾಗಿ ಕೈಗಳನ್ನು ಎದೆಗೊತ್ತಿ ಕೊಂಡ. ಈ ಹೆಣ್ಣು ಗಂಡು ಎಂಥಾ ಅಪೂರ್ವ ಸೃಷ್ಟಿಗಳು. ಈ ಪರಸ್ಪರ ಪೂರಕ ಜೀವಗಳು ಬದುಕನ್ನು ಎಷ್ಟು ಸುಂದರಗೊಳಿಸಬಲ್ಲವು ಎನಿಸಿ ಕಣ್ಣು ತೇವಗೊಂಡವು.

## ಸರ್ವಾಂತರ್ಯಾಮಿ

ಸಕ್ಕರೆಯ ಅಂಶ
ಯಾವುದರಲ್ಲಿಲ್ಲ
(ಬೇವು, ಹಾಗಲ ಹೊರತುಪಡಿಸಿ)
ಪ್ರತಿಭೆ ಅಷ್ಟೊ ಇಷ್ಟೊ
ಪ್ರತಿಯೊಬ್ಬರಲ್ಲೂ
ಇರುತ್ತದೆ!

–ಸಿ.ಪಿ.ಕೆ.

